

# ತಿರಂಗಿ ಸರೋವರ

ಇಂಡೋನೇಷ್ಯಾದ ಕೆಲಿಮುಟು ಎಂಬುದು ಹೆಸರಾಂತ ಚಿಕ್ಕ ಜ್ವಾಲಾಮುಖಿ ಶಿಖರ. ಇದು ಎಂಡೆ ನಗರದ ಪೂರ್ವ ಭಾಗದಲ್ಲಿ, ಫ್ಲೋಸರ್ ದ್ವೀಪದ ಮಧ್ಯದಲ್ಲಿದೆ. ಈ ಶಿಖರದ ಮೇಲ್ಭಾಗದಲ್ಲಿ ಪ್ರಾಕೃತಿಕವಾದ ಮೂರು ಸರೋವರಗಳಿವೆ.

ಅಚ್ಚರಿಯ ವಿಷಯವೇನೆಂದರೆ ಒಂದೇ ಶಿಖರದ ನೆತ್ತಿಯ ಮೇಲೆ, ಒಂದರ ಪಕ್ಕ ಇನ್ನೊಂದರಂತೆ ಇದ್ದರೂ ಕೂಡಾ ಈ ಮೂರೂ ಸರೋವರಗಳು ಬೇರೆ ಬೇರೆ ಬಣ್ಣಗಳನ್ನು ಹೊಂದಿರುತ್ತವೆ. ಇಡೀ ಭೂಮಂಡಲದಲ್ಲಿ ಇದೊಂದು ಸ್ಥಳದಲ್ಲಿ ಮಾತ್ರ ನಾವು ಈ ಬಗೆಯ ವರ್ಣ ವೈವಿಧ್ಯ ವಿಸ್ಮಯ ಕಾಣಬಹುದು.

ಈ ವಿಶಿಷ್ಟ ತ್ರಿವರ್ಣ ಸರೋವರ ಹಾಗೂ ಶಿಖರವನ್ನು ಆವರಿಸಿರುವ ಮಂಜಿನಿಂದಾಗಿ ಕೆಲಿಮುಟು ಅಂತರಾಷ್ಟ್ರೀಯ ಮನ್ನಣೆಗೆ ಪಾತ್ರವಾಗಿದೆ. ಈ ಮೂರೂ ಸರೋವರಗಳಿಗೆ ಟಿವಿ ಆಟಾ ಬುಪು (ವಯಸ್ಸಾದವರ ಸರೋವರ), ಟಿವು ನ್ವ ಮುರಿ ಕೂಹ್ ಟೈ (ತರುಣ,ತರುಣಿಯರ ಸರೋವರ)ಮತ್ತು ಟಿವು ಅಟಾ ಪೊಲೊ (ದುಷ್ಟ ಆತ್ಮಗಳ ಸರೋವರ) ಎಂಬ ಹೆಸರುಗಳೂ ಇವೆ.

ಜ್ವಾಲಾಮುಖಿ ಅನಿಲದ ಚಟುವಟಿಕೆಯಿಂದ ನೀರಿನಲ್ಲಿನಲ್ಲಿರುವ ಖನಿಜಗಳು ರಾಸಾಯನಿಕ ಕ್ರಿಯೆಗಳಿಗೆ ಒಳಪಟ್ಟು ನೀರಿನ ಬಣ್ಣ ಬದಲಾಗುತ್ತದೆ ಎಂದು ನಂಬಲಾಗಿದೆ. ಈ ವಿವಿಧ ಬಣ್ಣಗಳ ಸರೋವರಗಳು ಪ್ರವಾಸಿಗರ ಆಕರ್ಷಣೆಯ ತಾಣವೂ ಆಗಿವೆ.

■ ವಿದ್ಯಾ ವಿ. ಹಾಲಭಾವಿ

